ಪಂಪನ ಬನವಾಸಿಗೆ ಸೇರಿದ ವೆಂಕಟೇಶ ದೀಕ್ಷಿತರ ಕೈಹಿಡಿದಿರುವುದು ಕಾವ್ಯವಲ್ಲ, ಕಥನ. ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿರುವ ಅವರು, ಸೇನೆಯಲ್ಲಿ ವಾರೆಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡ, ಶ್ರೀನಗರ, ದಿಲ್ಲಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರ ನೂರಾರು ಕಥೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. 'ಕಾವಡಿ', 'ಬೇರಿಗಂಟಿದ ಮಣ್ಣು' ಕಥಾಸಂಕಲನಗಳು. 'ನಕ್ಷತ್ರ ನುಂಗುವ ಸಮಯ' ಕಾದಂಬರಿ.

ಊರಲ್ಲಿ ಹರಡಿತ್ತು. ನಾಗೂರಿಗೆ ಮದುವೆಮಾಡಿ ಕೊಟ್ಟ ಸುಗುಣಾ ಕೇದಾರನ ತಂಗಿ. ಬೇರೆ ವಂಶಕ್ಕೆ ಕೊಟ್ಟಿದ್ದರಿಂದ ಕುಟುಂಬದವಳಾಗುವುದಿಲ್ಲ ಎಂಬ ನಿಷ್ಕರ್ಷೆಗೆ ಬಂದು ಅವಳಿಗೆ ಸುದ್ದಿ ಕಳಿಸಿದರು. ಮೀನಮೇಷ ಎಣಿಸಿದ ಆ ಮನೆಯವರು ನಂತರ ಜ್ಯೋತಿಷಿಗಳಲ್ಲಿ ಕೇಳಿ ಒಪ್ಪಿದರು. ಹೇಗೂ ಕೊಟ್ಟುಬಿಡುವ ಮಗು ಅನ್ನುವ ನೋವಿನಲ್ಲಿ ಹೆಸರಿಡುವ ಸಮಾರಂಭದ ಆಸಕ್ತಿ ಯಾರಿಗೂ ಇರಲಿಲ್ಲ. ಹತ್ತನೆಯ ದಿನ ಬಂದ ಸುಗುಣಾಳ ಮಡಿಲಲ್ಲಿ ಮಗುವನ್ನು 'ಇದನ್ನ ತೊರೆದೆವು... ಇದಿನ್ನು ನಮ್ಮದಲ್ಲ' ಅನ್ನುತ್ತ ಹಾಕಿದರು. ದಾನದಲ್ಲಿ ತನ್ನ ಮಡಿಲಿಗೆ ಹಾಕಿಸಿಕೊಂಡು ಅವತ್ತೇ ಊರಿಗೆ ಮರಳಿದಳು. ಅವಳಿಗಾಗಲೇ ಆರುತಿಂಗಳ ಹೆಣ್ಣುಮಗುವಿತ್ತು. ಮೊಲೆಯಲ್ಲಿ ಸಮೃದ್ಧವಾಗಿ ಹಾಲಿತ್ತು.

***

ಪಿಯುಸಿ ಎರಡನೇ ಟರ್ಮ್ ಪರೀಕ್ಷೆ ಹತ್ತಿರವೇ ಇತ್ತು. ಮಾಳಿಗೆಮೇಲೆ ಫಿಸಿಕ್ಸ್ ಲೆಕ್ಕಗಳನ್ನು ಬಿಡಿಸುತ್ತಾ ಕುಳಿತಿದ್ದ. ಆ ಕಡೆ ಮಂದಾಳೂ ತನ್ನ ಪರೀಕ್ಷೆಯ ತಯಾರಿಯಲ್ಲಿದ್ದಳು. 'ಏ ತೊರದಾ... ಕೆಳಗೆ ಬಾ ಇಲ್ಲಿ. ಹಳದೂರಿಗೆ ಅರ್ಜೆಂಟು ಹೋಗಬೇಕು' – ಜಗುಲಿಯಿಂದ ಗಂಗಪ್ಪನ ದನಿ ಬಂತು.

ಕೆಳಗೆ ಬಂದ ತೊರದನಿಗೆ ಮಾವನ ಜೊತೆ ಅತ್ತೆ, ಅಜ್ಜಿ ಎಲ್ಲಾ ನಿಂತಿದ್ದು ಕಾಣಿಸಿತು. ಎಲ್ಲರ ಮುಖದಲ್ಲು ಯಾವುದೋ ಒತ್ತಿಟ್ಟ ಮೌನ ಹೆಪ್ಪುಗಟ್ಟಿತ್ತು. ಅತ್ತೆ ಆಗಾಗ ಕಣ್ಣೊರೆಸಿಕೊಳ್ಳುತ್ತಿದ್ದಳು. ಒಂದು ಜೊತೆ ಬಟ್ಟೆ ತೆಗೆದುಕೊಳ್ಳಲು ಹೇಳಿದ ಮಾವ ತನ್ನ ಹಳೇ ಮಾರುತಿ ವ್ಯಾನನ್ನು ರಸ್ತೆಗೆ ತಂದ. ಸುಗುಣಾಳನ್ನೂ ತೊರದನನ್ನೂ ಹತ್ತಿಸಿಕೊಂಡ ವ್ಯಾನು ಹಳದೂರ ರಸ್ತೆ ಹಿಡಿಯಿತು.

ಹಳದೂರಿಗೆ ಅಲ್ಲಿಂದ ಎಂಟು ಕಿಲೋಮೀಟರಿನ ದಾರಿ. ತೊರದನಿಗೆ ಅದು ತಾನು ಹುಟ್ಟಿದೂರು ಅನ್ನುವುದು ಗೊತ್ತಿತ್ತು ಬಿಟ್ಟರೆ ಅಲ್ಲಿಗೆ ಯಾವತ್ತೂ ಹೋಗಿರಲಿಲ್ಲ. ಅವನಿಗೆ ಸುತ್ತಲಿನ ತಿಳಿವಳಿಕೆ ಬರುವ ವಯಸ್ಸಿನಲ್ಲಿ ಅತ್ತೆ ಮಾವನ ಯಜಮಾನಿಕೆಯ ಅರಿವು ಬಂದಿತ್ತು. ಅವನಿಗಿಂತ ಇಬ್ಬರು ಬಹಳ ಹಿರಿಯರಾದ ಅಣ್ಣಂದಿರಿಗೆ ವಿಧೇಯತೆ ತೋರಬೇಕಿತ್ತು. ಅವನದೇ ವಯಸ್ಸಿನ ಮಂದಾ ಆಟಪಾಟಕ್ಕು, ನಂತರ ಒಂದೇ ಕ್ಲಾಸಿಗೆ ಸೇರಿದ ಸಹಪಾಠಿಯಾಗಿ ಸ್ನೇಹಿತೆಯೂ ಆಗಿದ್ದಳು. ಶಾಲೆಗೆ ಹಚ್ಚುವಾಗ ಪೋಷಕರ ಜಾಗದಲ್ಲಿ ಮಾವನ ಹೆಸರು ಬರೆಸಿದ್ದರು. ಮಾವನ ಮನೆಹೆಸರು 'ಮಡಕಿಯವರ' ಇವನ ಹೆಸರಮುಂದು ಸೇರಿಕೊಂಡಿತ್ತು. ಆದರೆ, ಅತ್ತೆ ಮಾವ ತನ್ನ ಹಡೆದವರಲ್ಲ ಅನ್ನುವ ಅರಿವು ಹೇಗೋ ಅವನ ಒಳಪ್ರಜ್ಞೆಯಲ್ಲಿ ನಿತ್ಯದ ವ್ಯವಹಾರಗಳ ಮೂಲಕ ನುಸುಳಿಕೊಂಡದ್ದು ಗೊಂದಲ ಮೂಡಿಸುತ್ತಿತ್ತು. ಎಸ್‌ಎಸ್‌ಎಲ್ಸಿಯಲ್ಲಿ ತೊಂಬತ್ತೊಂಬತ್ತು ಪಾಯಿಂಟ್ ಐದು ಪರ್ಸೆಂಟ್ ಅಂಕ ಗಳಿಸಿದ್ದ ಅವನ ಹೆಸರು ಸ್ಥಳೀಯ ಪೇಪರಲ್ಲಿ ಫೋಟೊ ಸಮೇತ ಬಂದಿತ್ತು. ಖುಷಿಯಲ್ಲಿದ್ದವನಿಗೆ ಆ ಹೆಸರು ನೋಡಿ, 'ಯಾರೇ ಮಂದಾ ನನಗೆ ಇಂತಾ ಹೆಸರಿಟ್ರು? ಅರ್ಥವೇ ಇಲ್ಲ ಅದಕ್ಕೆ?' ಎಂದು ಬೇಸರಪಟ್ಟಿದ್ದಕ್ಕೆ, 'ನಿಂಗೆ ಹೆಸರೇ ಇಟ್ಟಿರಲಿಲ್ಲವಂತೋ, ತ್ಯಜಿಸಿದವನಾಗಿದ್ದಕ್ಕೆ ತೊರದೋನು ತೊರದೋನು ಅಂತಾ ಕರೆದ್ರಂತೆ. ಅದೇ ಹೆಸರು ನಿಂತು ತೊರದಾ ಅಂತ ಆಗೋಯ್ತಂತೆ...' ಅಂದವಳಿಗೆ ತಟ್ಟನೆ ಅರಿವಾಗಿ, '...ಬಿಡೋ ಈಗೇನು? ವಿಚಿತ್ರ ವಿಚಿತ್ರ ಹೆಸರೇ ಫ್ಯಾಶನ್ನಾಗಿರೋವಾಗ ನೀನೊಬ್ಬ! ಯಾವ ಹೆಸರಿರ್ಲಿ; ನೋಡು, ನಾ ನಿಂಜೊತೆ ಇದ್ದೀನಿ' ಅಂದಿದ್ದಳು.

ವ್ಯಾನು ಊರಿಗೆ ಸಮೀಪಿಸಿತು. ಅಕ್ಕಪಕ್ಕ ಆವರಿಸಿಕೊಂಡ ಹೊಲಗದ್ದೆಗಳಲ್ಲಿ ಅಲ್ಲಲ್ಲಿ ಟ್ರ್ಯಾಕ್ಟರುಗಳು ಕೆಲಸದಲ್ಲಿದ್ದವು. ಊರೊಳಗೆ ಮನೆಗಳೆದುರು ಬೈಕುಗಳು, ಒಂದೆರಡು ಟಾರಸಿ, ಹಂಚಿನಮನೆಗಳ ಮುಂದೆ ಕಾರುಗಳು ನಿಂತಿದ್ದವು. ದಾರಿಪಕ್ಕದಲ್ಲಿ ತರಕಾರಿಯವರ ಸಂತೆ ನೆರೆದಿತ್ತು. ಸಣ್ಣದೊಡ್ಡ ಅಂಗಡಿಗಳಲ್ಲಿ, ನಾಕಾರು ಹೋಟೆಲುಗಳಲ್ಲಿ